

ಲಯನ್ಸ್ ಪಾರ್ಕ್‌ನಲ್ಲಿ ಮರದ ನೆರಳಿನಲ್ಲಿ ಮಲಗಿರುವ ಸಿಂಹ

## ಜೋಹಾನ್ಸ್‌ಬರ್ಗ್ (ಜೋಬರ್ಗ್).

ಚಿನ್ನದ ಗಣಿ, ಗಾಂಧಿ ಮತ್ತು ನೆಲ್ಸನ್ ಮಂಡೇಲಾ ಅವರನ್ನು ಇಟ್ಟಿದ್ದ ಸೆಲ್ ನಂಬರ್ ನಾಲ್ಕು – ಸ್ಥಳೀಯರು ಪ್ರೀತಿಯಿಂದ ಕರೆಯುವ ಜೋಬರ್ಗ್‌ನ ಪ್ರಮುಖ ಆಕರ್ಷಣೆಗಳು. ನಮಗೆ ಮುಂಬಯಿ ಇದ್ದಂತೆ ದಕ್ಷಿಣ ಆಫ್ರಿಕಾದ ಅತಿದೊಡ್ಡ ಪಟ್ಟಣ, ವ್ಯವಹಾರದ ಕೇಂದ್ರ ಈ ನಗರ ಮತ್ತು ಇಲ್ಲಿನ ಏರ್‌ಪೋರ್ಟ್ ಜಗತ್ತಿನೆಲ್ಲೆಡೆ ಸಂಪರ್ಕ ಕಲ್ಪಿಸುವ ಕೇಂದ್ರ ಕೂಡ.

ಆಫ್ರಿಕಾ ಎಂಬ ಹೊಸದೊಂದು ಭೂಖಂಡವನ್ನು ಸ್ಪರ್ಶಿಸುತ್ತಿರುವ ರೋಮಾಂಚನ ನನಗೆ. ಎತ್ತ ನೋಡಿದರೂ ಒಣ ಹುಲ್ಲು, ಕುರುಚಲು ಮುಳ್ಳುಕಂಟಿಗಳು ಕಣ್ಣಿಗೆ ಬಿದ್ದು ಇದೊಂದು ಮರುಭೂಮಿ ಎಂಬಂತೆ ಭಾಸವಾಗುತ್ತಿತ್ತು. ಸುಯ್ಯನೆ ಸುಳಿಯುವ ಚಳಿಗಾಳಿ, ನೆತ್ತಿಯ ಮೇಲೆ ಚುರು ಚುರು ಬಿಸಿಲು. ಬ್ರಿಟಿಷರು ಕಟ್ಟಿದ ಭವ್ಯವಾದ ಸಾಮ್ರಾಜ್ಯ, ಹಲವಾರು ಕರಿಯ ಮೂಲನಿವಾಸಿಗಳು ದಾರಿ ತಪ್ಪಿ ಡ್ರಗ್ಸ್, ಭೂಗತ ಮಾಫಿಯಾದ ಸೆಳೆತಕ್ಕೆ ಒಳಗಾಗಿ ಎಲ್ಲವನ್ನೂ ಮಣ್ಣುಪಾಲು ಮಾಡುತ್ತಾ ಎಲ್ಲರೂ ಭಯದಿಂದ ಎಲೆಕ್ಟ್ರಿಕ್ ಬೇಲಿಯ ನೆರಳಿನಲ್ಲಿ ಬದುಕುತ್ತಿರುವುದು... ಇಡೀ ಜೋಹಾನ್ಸ್‌ಬರ್ಗ್ ವೈರುಧ್ಯಗಳ ರಾಜಧಾನಿ ಎನ್ನಬಹುದು.

ಪಾಲಿ ನಮ್ಮ ಸ್ಥಳೀಯ ಟ್ರಾವೆಲ್ ಏಜಂಟ್. ಬೆಳಿಗ್ಗೆ ಒಂಬತ್ತಕ್ಕೆ ತನ್ನ ಮಗ ಕಿಗಾಸು ಉರುಫ್ ಕೆಜಿಯೊಡನೆ ನಮ್ಮನ್ನು ಜೋಬರ್ಗ್ ನೋಡಿಕೊಂಡು ಬರಲು ಕಳಿಸಿದ. ಮೊದಲು ಹೋಗಿದ್ದು ನೆಲ್ಸನ್ ಮಂಡೇಲಾರನ್ನಿಟ್ಟಿದ್ದ ಜೈಲು ಹಾಗೂ ಅಲ್ಲಿಯೇ ಇರುವ ಅಪಾರ್ಥೀಡ್ ಮ್ಯೂಸಿಯಮ್, ನೆಲ್ಸನ್ ಮಂಡೇಲಾ ಗಾಂಧಿ ಸ್ಮಾರಕ ನೋಡಲು. ಗಾಂಧಿಯಿಂದಾಗಿ ನಮಗೆ ಇಲ್ಲಿನವರು – ಇಲ್ಲಿನವರಿಗೆ ನಾವು ಬಂಧುಗಳಂತೆ ಕಾಣುತ್ತೇವೆ.

ನಗರದ ಹೃದಯಭಾಗವನ್ನು ಹಾದುಹೋಗುವ ಇಕ್ಕೆಡೆಯಲ್ಲೂ ಕಂಡಿದ್ದು ಬಹುಮಹಡಿಗಳ ಕಟ್ಟಡಗಳು. ಆದರೆ ಅಲ್ಲೀಗ ಹಾಡಹಗಲೇ ಯಾರೂ ಧೈರ್ಯವಾಗಿ ಓಡಾಡುವುದಿಲ್ಲ. ಎಷ್ಟೋ ಕಟ್ಟಡಗಳು ಖಾಲಿಯಾಗಿ ಬಾವಲಿಗಳ ಗೂಡಾಗಿವೆ. ಇನ್ನುಳಿದವು ಮಾಫಿಯಾದವರ ಅಡ್ಡೆಯಾಗಿವೆ. ಅಲ್ಲಲ್ಲಿ ಅಲ್ಪಸ್ವಲ್ಪ ಜನ ಕಂಡರೂ ಎಲ್ಲರೂ ಕರಿಯರೇ. ಬಿಳಿಯ ನಾಗರಿಕರಾರೂ ಅಲ್ಲಿ ಓಡಾಡುವ ಮಾತೇ ಇಲ್ಲ. ಬ್ರಿಟಿಷ್ ಭೂಮಾಲೀಕರು, ಗಣಿಧಣಿಗಳು ದೇಶ ಬಿಟ್ಟು ಪಲಾಯನ ಮಾಡಿ ಯಾವುದೋ ಕಾಲವಾಯ್ತು. ಈ ಸಿನಿಮೀಯ ದೃಶ್ಯವನ್ನು ನೋಡುತ್ತಾ ನಮ್ಮ ಗಮ್ಯಸ್ಥಾನ ತಲುಪಿಯಾಗಿತ್ತು. ಕಾರಿನಿಂದ ಹೊರಗೆ ಕಾಲಿಡುವಾಗ ನನ್ನೆದೆಯಲ್ಲಿ ಢವ ಢವ! ಕೆಜಿಯಾದರೂ ನಮ್ಮನ್ನು ರಕ್ಷಿಸುತ್ತಾನೆಯೋ ಎಂದರೆ ಅವನು ಅರ್ಧ ಕೆಜಿಯೂ ಇಲ್ಲದೆ ಒಣಗಿದ ಕಟ್ಟಿಗೆಯ ತುಂಡಿನಂತಿದ್ದ. ಇಲ್ಲಿಯೂ 'ನನ್ನನ್ನು ರಕ್ಷಿಸು' ಎಂದು ವಕ್ರತುಂಡನನ್ನೇ ಬೇಡಿಕೊಂಡೆ. ಸಾಮಾನ್ಯವಾಗಿ ಎಲ್ಲಾ ಟೂರಿಸ್ಟ್ ಹಾಟ್‌ಸ್ಪಾಟ್‌ಗಳಲ್ಲೂ ಭದ್ರತೆ ಚೆನ್ನಾಗೇ ಇರುವುದರಿಂದ ಹೆದರುವ ಅಗತ್ಯ ಇಲ್ಲ.

ಬಿಳಿಯ ಆಳುವವರು ಕರಿಯ ಬಂಡಾಯಕಾರರನ್ನು ಹೇಗೆಲ್ಲಾ ಶಿಕ್ಷಿಸುತ್ತಿದ್ದರು, ಅಲ್ಲಿ ಹೇಗೆ ನಮ್ಮ ಗಾಂಧಿ ತಾತ ಕೂಡ ಇದ್ದರು ಎಂಬುದನ್ನೆಲ್ಲ ನೆಲ್ಸನ್ ಮಂಡೇಲಾ ಮತ್ತು ಗಾಂಧಿ ಸ್ಮಾರಕಗಳಲ್ಲಿ ಬಿಂಬಗಳ ಮೂಲಕ ನೋಡಿ ಬಂದೆವು.



ಲಯನ್ಸ್ ಪಾರ್ಕ್‌ನಲ್ಲಿ ಕಂಡ ಜಿರಾಫೆ

ಕಾನ್‌ಸ್ಟಿಟ್ಯೂಶನ್ ಹಿಲ್‌ನಲ್ಲಿ ಉರಿಯುವ ಅಗ್ನಿಯೆದುರು ಜನಾಂಗೀಯ ಅಸಮಾನತೆಯ ಹೋರಾಟಕ್ಕೇ ಮೀಸಲಾಗಿದ್ದ ಕೋರ್ಟ್ ರೂಂ ನೋಡಿದಾಗ, ಕರಾಳ ದಿನಗಳ ನೆನಪು ಇನ್ನೂ ಅಲ್ಲೆಲ್ಲೋ ಸುಳಿದಾಡುತ್ತಿರುವ ಭಾಸ. ಗಾಳಿಯೂ ಭಾರವಾಗಿ ನಿಡುಸುಯ್ಯುತ್ತಿರುವ ಅನುಭವ...

ಚಿನ್ನದ ಗಣಿಯನ್ನು ನೋಡಿಬಂದಿದ್ದು, ಕಾರಿನಲ್ಲಿ ಕೂತು ಸಿಂಹ, ಚಿರತೆ ಮುಂತಾದ ಕಾಡುಪ್ರಾಣಿಗಳನ್ನು ಲಯನ್ಸ್ ಪಾರ್ಕ್‌ನಲ್ಲಿ ನೋಡಿ ಬಂದಿದ್ದು, ಮುದ್ದಾದ ಸಿಂಹದ ಮರಿಗಳ ಆಟೋಟವನ್ನು ನೋಡಿ, ಅವುಗಳ ಪಕ್ಕದಲ್ಲೇ ಕೂತು ಫೋಟೊ ತೆಗೆಸಿಕೊಂಡಿದ್ದು ಇವೆಲ್ಲ ಒಂದೇ ದಿನಕ್ಕೆ ಆಫ್ರಿಕಾವನ್ನು ಆಪೋಶನ ತೆಗೆದುಕೊಂಡಂಥ ಅನುಭವ ಕೊಟ್ಟಿತ್ತು. ಮನಸ್ಸು ಹಗುರಾಗಿತ್ತು; ದೇಹ ದಣಿದಿತ್ತು. ಹೋಟೆಲಿಗೆ ಬಂದು ಉಂಡ ಮೇಲೆ ನಿದ್ರೆ ಮಾಡಿದ್ದಷ್ಟೇ ಗೊತ್ತು.

ಇಡೀದಿನ ನಮ್ಮೊಂದಿಗಿದ್ದ ಈ ಅರ್ಧ 'ಕೆಜಿ'ಯ ಬಗ್ಗೆ ಹೇಳದಿದ್ದರೆ ಹೇಗೆ? ಇನ್ನೂ ಇಪ್ಪತ್ತೂರು ವರ್ಷದ ಆತ ಆಗಲೇ ಎರಡು ಮಕ್ಕಳ ತಂದೆ! ಅಲ್ಲಿನ ಮೂಲನಿವಾಸಿಯಾದ ಕೆಜಿಯ ಹೆಂಡತಿ ಆಲಿಯಾ ಸಿಂಗ್ ಭಾರತೀಯ ಮೂಲದವಳು. ಇಡೀ ದಿನ ಕಿಗಸು ನಮ್ಮನ್ನು ನಗಿಸುತ್ತಾ, ನಮ್ಮ ಸೌಕರ್ಯಕ್ಕೆ ಚೂರೂ ತೊಂದರೆಯಾಗದಂತೆ ನೋಡಿಕೊಂಡ. ತನ್ನನ್ನು ಕೆಜಿ ಎಂದು ಕರೆಯಿರಿ ಅಂತ ಅವನೇ ಹೇಳಿದ್ದ. ತನ್ನಪ್ಪ ಪಾಲಿ ಮಹಾ ಜುಗ್ಗ ಎಂತಲೂ, ವಯಸ್ಸಾಯಿತು ಇನ್ನಾದರೂ ಮಕ್ಕಳಿಗೆ ಬಿಸಿನೆಸ್ ಕೊಟ್ಟು 'ಪಾಲಿ ಆ್ಯಂಡ್ ಸನ್ಸ್' ಅನ್ನು 'ಸನ್ಸ್ ಆ್ಯಂಡ್ ಪಾಲಿ' ಎಂದು ಕಂಪೆನಿ ಹೆಸರು ಬದಲಾಯಿಸಬೇಕೆಂದೂ ಹೇಳಿದ ಆ ಕನಸುಗಣ್ಣಿನ ಹುಡುಗ. ಅಲ್ಲಿನ ಮಾಫಿಯಾ ದಂಧೆಗೆ ಸರ್ಕಾರದಲ್ಲಿರುವ, ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರ, ಕೆಟ್ಟ ಆಡಳಿತ, ಕೆಲಸವಿಲ್ಲದಿರುವುದು ಹಾಗೂ ಡ್ರಗ್ಸ್ ಪ್ರಮುಖ ಕಾರಣ ಎಂದು ಹೇಳಿದ. ಹೀಗೆಲ್ಲಾ ಇದ್ದರೂ ನನ್ನ ದೇಶ ಸುಂದರವಾಗಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡ.

## ಕ್ರೂಗರ್ ನ್ಯಾಷನಲ್ ಪಾರ್ಕ್

ಜೋಬರ್ಗ್‌ನಿಂದ ಅರ್ಧ ಮುಕ್ಕಾಲು ತಾಸು ಪುಟ್ಟದೊಂದು ವಿಮಾನದಲ್ಲಿ ಕೂತು ನೆಲ್ಸ್ ಪ್ರುಟ್ ಎಂಬಲ್ಲಿ ಬಂದಿಳಿದೆವು. ಅಲ್ಲಿ ಮೂರು ವಿಮಾನ ನಿಲ್ದಾಣಗಳಿವೆ. ನಮ್ಮ ಲಾಡ್ಜ್‌ಗೆ ಬಹಳ ಸಮೀಪವಿರುವ ಏರ್‌ಪೋರ್ಟ್ ಇದೇ ಎಂದು ತಪ್ಪಾಗಿ ಭಾವಿಸಿ ನಮ್ಮ ಟ್ರಾವೆಲ್ ಏಜೆಂಟ್ ಮಾಡಿದ ಎಡವಟ್ಟಿನಿಂದಾಗಿ ನಾವು ಸುಮಾರು ಮೂರೂವರೆ ತಾಸು ಕಾರಿನಲ್ಲಿ ಪ್ರಯಾಣ ಮಾಡಬೇಕಾಯಿತು. ದಾರಿಯುದ್ದಕ್ಕೂ ಕಂಡ ಹಣ್ಣಿನ ತೋಟಗಳು, ಬಾಳೆ ತೋಟ, ನೀಲಗಿರಿ ತೋಪುಗಳು ನಮ್ಮ ಬೇಸರವನ್ನು ಮರೆಸಿದವು. ಬರೀ ಒಣಗಿದ ಕುರುಚಲು ಗಿಡ ನೋಡಿ ಬೇಸತ್ತಿದ್ದ ನಮಗೆ ಅಲ್ಲಿ ಕಂಡ ಹಸಿರು ಖುಷಿಕೊಟ್ಟಿತ್ತು. ದಾರಿಯಲ್ಲಿ ಕಿತ್ತಳೆ, ಮೆಕಡೇಮಿಯಾ ಎಲ್ಲಾ ಕೊಂಡು ತಿಂದೆವು.

ಲಾಡ್ಜ್ ಸೇರುವಾಗ ತುಂಬಾ ತಡವಾಗಿದ್ದರಿಂದ